## ಷೂ ಮತ್ತು ಸಾಕ್ಸ್ ಅಥವಾ ಸ್ಯಾಂಡಲ್ಸ್ ಖರೀದಿಗಾಗಿ ನೀಡಲಾಗಿರುವ ಪ್ರೋತ್ಸಹಾದಾಯಕ ಅನುದಾನದ ನಿರ್ವಹಣೆ ವ್ಯವಸ್ಥೆ ತಂತ್ರಾಂಶದ ಬಳಕೆದಾರರ ಕೈ ಪಿಡಿ.

ಪ್ರತಿ ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಯು ಆಯಾ ಕ್ಲಸ್ಟರ್ ವ್ಯಾಪ್ತಿಯ ಶಾಲೆಗಳ ಷೂ ಮತ್ತು ಸಾಕ್ಸ್ ಅಥವಾ ಸ್ಯಾಂಡಲ್ಸ್ ಖರೀದಿ ಮಾಹಿತಿಯನ್ನು ತಂತ್ರಾಂಶದಲ್ಲಿ ದಾಖಲಿಸಲು ಕ್ಲಸ್ಟರ್ ಕೋಡ್‌ನ್ನು user Id ಮತ್ತು ಅದೇ ಕೋಡ್‌ನ್ನು ಪಾಸ್‌ವರ್ಡ್ ಆಗಿ ಬಳಸಿ ಲಾಗಿನ್ ಮಾಡುವುದು.




ತಂತ್ರಾಂಶಕ್ಕೆ ಲಾಗಿನ್ ಆದ ಕೂಡಲೇ ಕಡ್ಡಾಯವಾಗಿ ಪಾಸ್‌ವರ್ಡ್ ಬದಲಾಯಿಸುವುದು. ಪಾಸ್‌ವರ್ಡ್ ಕನಿಷ್ಠ 6 characters ಗಳನ್ನು ಒಳಗೊಂಡಿರಬೇಕು. ತದನಂತರ ಲಾಗಿನ್ ಆಗಲು ಬದಲಾಯಿಸಿದ ಪಾಸ್‌ವರ್ಡ್‌ಅನ್ನು ಬಳಸಬೇಕು.



ಬದಲಾಯಿಸಿದ ಪಾಸ್‌ವರ್ಡ್‌ಅನ್ನು ಬಳಸಿ ಲಾಗಿನ್ ಆದ ನಂತರ ತಂತ್ರಾಂಶದ ಬಳಕೆಯ ಬಗ್ಗೆ ಇರುವ ಸೂಚನೆಗಳನ್ನು ಕಡ್ಡಾಯವಾಗಿ ಓದಿ ತಂತ್ರಾಂಶದಲ್ಲಿ ದಾಖಲಿಸಲು ಬೇಕಾದ ಎಲ್ಲಾ ಮಾಹಿತಿಯನ್ನು ಸಿದ್ಧವಾಗಿರುಸುವುದು.



**Registration Form -**ಷೂ ಮತ್ತು ಸಾಕ್ಸ್ ಅಥವಾ ಸ್ಯಾಂಡಲ್ಸ್ ಖರೀದಿ ಮಾಹಿತಿಯನ್ನು ದಾಖಲಿಸಲು **Details** ನಲ್ಲಿರುವ **Registration Form** ಕ್ಲಿಕ್ ಮಾಡಿ.




- Choose School DISE ನಲ್ಲಿರುವ ಆಯಾ ಕ್ಲಸ್ಟರ್ ವ್ಯಾಪ್ತಿಯ ಶಾಲೆಯನ್ನು ಆಯ್ಕೆ ಮಾಡಿದಾಗ ಕೆಳಗೆ ಕಾಣುವ ಶಾಲೆಯ ಹೆಸರು, ಶೈಕ್ಷಣಿಕ ವರ್ಷ ಮತ್ತು ಶಾಲೆಗೆ ನೀಡಿದ ಅನುದಾನವನ್ನು ಪರಿಶೀಲಿಸುವುದು.
- ಆ ಶಾಲೆಯ ಎಸ್ ಡಿ ಎಂ ಸಿ ಸದ್ಯಸರ ಹೆಸರು, ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು ದಾಖಲಿಸಿ. Add ಬಟನ್ ಕ್ಲಿಕ್ ಮಾಡುವ ಮೂಲಕ ಆ ಶಾಲೆಯ ಎಲ್ಲಾ ಎಸ್ ಡಿ ಎಂ ಸಿ ಸದ್ಯಸರ ಮಾಹಿತಿಯನ್ನು ಕಡ್ಡಾಯವಾಗಿ ತಂತ್ರಾಂಶದಲ್ಲಿ ಅವಡಿಸುವುದು.
- ತರಗತಿಯನ್ನು ಆಯ್ಕೆ ಮಾಡಿ, ಪ್ರತಿ ತರಗತಿಯಲ್ಲಿರುವ ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳ ಸಂಖ್ಯೆಯನ್ನು ತಂತ್ರಾಂಶದಲ್ಲಿ ದಾಖಲಿಸಿ.

- ಆ ಶಾಲೆಯ ಮಕ್ಕಳಿಗೆ ಷೂ ಮತ್ತು ಸಾಕ್ಸ್ ಖರೀದಿಸಲಾಗಿದೆಯೇ ಅಥವಾ ಸ್ಯಾಂಡಲ್ಸ್ ಖರೀದಿಸಲಾಗಿದೆಯೇ ಎಂದು ಆಯ್ಕೆ ಮಾಡಿ, ಷೂ ಮತ್ತು ಸಾಕ್ಸ್ ಅಥವಾ ಸ್ಯಾಂಡಲ್ಸ್ ಖರೀದಿಗಾಗಿ ಶಾಲೆಯು ನಡೆಸಿದ ಎಸ್ ಡಿ ಎಂ ಸಿ ಸಭೆಯ ನಡವಳಿಯ ಸ್ಕ್ಯಾನ್ ಪ್ರತಿಯನ್ನು ಅಪ್ಲೋಡ್ ಮಾಡಿ ನಂತರ Save ಬಟನ್ ಕ್ಲಿಕ್ ಮಾಡುವುದು.




**Quotation Form-** Registration Form ನಲ್ಲಿರುವ ಎಲ್ಲಾ ಮಾಹಿತಿಯನ್ನು ಭರ್ತಿ ಮಾಡಿದ ನಂತರ Details-Menu ವಿನಲ್ಲಿರುವ Quotation Form ಅನ್ನು ಆಯ್ಕೆ ಮಾಡಿ.

ಶಾಲೆಯ ಮುಂದೆ ಇರುವ Quotation ಕ್ಲಿಕ್ ಮಾಡಿ ಆಯಾ ಶಾಲೆಗೆ ಷೂ ಮತ್ತು ಸಾಕ್ಸ್ ಅಥವಾ ಸ್ಯಾಂಡಲ್ಸ್ ಸರಬರಾಜು ಮಾಡಲು ವಿವಿಧ ಸರಬರಾಜುದಾರರ ಸಲ್ಲಿಸಿದ್ದ ಕೊಟೇಷನ್‌ಗಳ ವಿವರ– ಹೆಸರು, ಟಿನ್ ಸಂಖ್ಯೆ, ಸದರಿ ಸರಬರಾಜುದಾರರು ಸಲ್ಲಿಸಿದ್ದ ಕೊಟೇಷನ್‌ನ ಸ್ಕ್ಯಾನ್ ಮಾಡಿದ ಪ್ರತಿಯನ್ನು ಅಪ್ಲೋಡ್ ಮಾಡುವುದು.

ಎಲ್ಲಾ ಸರಬರಾಜುದಾರರರು ಸಲ್ಲಿಸಿದ್ದ ಕೊಟೇಷನ್‌ಗಳ ಮಾಹಿತಿಯನ್ನು ಕಡ್ಡಾಯವಾಗಿ ತಂತ್ರಾಂಶದಲ್ಲಿ ದಾಖಲಿಸುವುದು.




ಶಾಲೆಗೆ ಷೂ ಮತ್ತು ಸಾಕ್ಸ್ ಅಥವಾ ಸ್ಯಾಂಡಲ್ಸ್ ಖರೀದಿಗಾಗಿ ಬಿಡುಗಡೆಯಾಗಿದ್ದ ಮೊತ್ತ, ದಾನಿಗಳು ನೀಡಿದ ಮೊತ್ತ, ತಂತ್ರಾಂಶದಲ್ಲಿ ದಾಖಲಿಸಿದ ಎಲ್ಲಾ ಕೊಟೇಷನ್‌ಗಳಲ್ಲಿ **L1** ಸರಬರಾಜುದಾರರ ಕೊಟೇಷನ್ ಮೊತ್ತ ಮತ್ತು Balance ಇವುಗಳನ್ನು Balance ನಲ್ಲಿ ಪರಿಶೀಲಿಸಬಹುದಾಗಿದೆ.